St. Norbert
# Campus Chronicles




Vol -3, Issue 1 St. Norbert School, CBSE Affliation No: 831041, Chowhalli, T. Narasipura - 571124 August - 2022

## 'NATION FIRST, ALWAYS FIRST' - SR. SUMI K R, PRINCIPAL




I love the country where I live. I love my India. My heart and soul are for my country. Such feelings of our leaders made India free from the British rulers. And from struggle to freedom, India moved forward. We are proud to be part of independent India. We are the largest democracy in the world today. Unity in diversity is the specialty of Indians. Being proud citizens of our country, we can never forget the importance of 15th August in our history because this day India celebrated freedom. This year marks the 75th anniversary of the culmination of our freedom struggle. It's a day to celebrate our freedom by paying tribute to the freedom fighters who showed immense love, bravery, sacrifice and patriotism for their mother nation and gifted us with a beautiful and free India. We, the citizens of India, must pledge to carry on the legacy to make our country proud. Every year we celebrate Independence Day on 15th August. Independence Day is one of the most honourable celebrations of the nation. India got freedom in 1947 from British rule. This day is celebrated with a lot of enthusiasm and patriotism. We pay tribute to our country and freedom fighters who lost their lives in setting our country free. Every Indian celebrates Independence Day in respect for the country, irrespective of caste, creed, and religion. A national holiday is observed on Independence Day. Everyone celebrates Independence Day by hoisting flags in schools, offices or society. Indian Independence Day marks the end of British rule in 1947 and the pathway to freedom and an independent India.

This day is a plethora of emotions, it reminds us of the pain of being enslaved; of the strength of unity, it defines sacrifice, it gives us an example that some wars can be won with non-violence and of all the things, it makes us value and cherish the freedom that we have today. It is our responsibility, as proud citizens, of this country, to sincerely perform our duty and progress together for the growth and development of our country. Keeping the sacrifices of our ancestors in mind, we should take an oath to carve a better future for our motherland.

India is our country and it is high time that each and every citizen of the nation should realize their duties and responsibilities. We need to work with devotion, dedication and sincerity. Let us join our hands to make India the best nation in the world. Let us celebrate freedom and celebrate independence by paying back to our country.

## ಭಾರತದಲ್ಲಿ ಗಾಂಧೀಜೀಯುವರ ಆರಂಭದ ಹೋರಾಟಗಳು : ಮಹೇಶ್ ಕುಮಾರ್ . ಹೆಚ್. ಪಿ

ಮಹಾತ್ಮಾ ಗಾಂಧಿ ತಮ್ಮ ರಾಜಕೀಯ ಗುರು ಗೋಖಲೆಯವರ ಮಾರ್ಗದರ್ಶನದ ಮೇರೆಗೆ ಇಲ್ಲಿಯ ಜನರ ಬದುಕು, ಸಮಾಜ ಮತ್ತು ಆ ಹೊತ್ತಿನ ಸಾಮಾಜಿಕ ವಾಸ್ತವಗಳನ್ನು ತಿಳಿಯುವ ಸಲುವಾಗಿ ರೈಲಿನ ಮೂರನೇ ದರ್ಜೆಯ ಬೋಗಿಯಲ್ಲಿಯೇ ಭಾರತ ದರ್ಶನವನ್ನು ಮಾಡಿದರು. 1916ರಲ್ಲಿ ಅವರು ಅಹಮದಾಬಾದ್‌ನಲ್ಲಿ ಸಬರಮತಿ ಆಶ್ರಮವನ್ನು ಸ್ಥಾಪಿಸುವ ಮೂಲಕ ತಮ್ಮ ಹೋರಾಟಕ್ಕೆ ಒಂದು ಸಾಂಸ್ಥಿಕ ರೂಪವನ್ನು ಕೊಟ್ಟರು. 1917ರಲ್ಲಿ ಗಾಂಧಿ ಬಿಹಾರದ ಚಂಪಾರಣ್‌ನಲ್ಲಿ, ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರ ಪರವಾಗಿ 'ಚಂಪಾರಣ್ ಚಳವಳಿ' ಆರಂಭಿಸಿ, ಬ್ರಿಟಿಷ್ ಸರ್ಕಾರ ಮಣಿಯುವಂತೆ ಮಾಡಿದರು. 1918ರಲ್ಲಿ ಅಹಮದಾಬಾದ್‌ನ ಹತ್ತಿ ಗಿರಣಿಯ ಕಾರ್ಮಿಕರ ಸಂಬಳ ಹೆಚ್ಚಿಸುವ ಸಲುವಾಗಿ ಅವರ ಜತೆಗೂಡಿ ಚಳವಳಿ ಆರಂಭಿಸಿ ಯಶಸ್ಸು ಪಡೆದರು. ಇದೇ ವರ್ಷ ಗುಜರಾತ್‌ನ ಖೇಡಾ ಎಂಬಲ್ಲಿ ನಡೆದ ರೈತರ ಮೇಲಿನ ತೆರಿಗೆಸಂಬಂಧಿತ ಹೋರಾಟವೂ ಕೂಡಾ ಯಶಸ್ವಿಯಾಯಿತು. ಈ ಎಲ್ಲಾ ಹೋರಾಟಗಳಲ್ಲೂ ಗಾಂಧಿ ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗವನ್ನು ಪರಿಚಯಿಸಿ ಪ್ರಯೋಗಿಸಿದರು. ಈ ಜೊತೆಗೆ ಭಾರತೀಯ ಜನಸಾಮಾನ್ಯರ ಜೊತೆಗೆ ಸಂವಾದವನ್ನು ಪ್ರಾರಂಭಿಸುವ ಮೂಲಕ ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಜನಮುಖಿಯಾಗಿ ಬದಲಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು.

ಜಲಿಯಾನ್‌ವಾಲಾಭಾಗ್ ಹತ್ಯಾಕಾಂಡ: ಬ್ರಿಟಿಷ್ ಸರಕಾರ ರೌಲೆತ್ ಕಾಯ್ದೆಯನ್ನು ಮಾರ್ಚ್ 1919ರಲ್ಲಿ ಜಾರಿಗೆ ತಂದಿತು. ಇದರ ಮೂಲಕ ಬ್ರಿಟಿಷರು ಭಾರತೀಯ ರಾಷ್ಟ್ರೀಯವಾದಿಗಳನ್ನು ನಿಯಂತ್ರಿಸಲು ಪ್ರಾರಂಭಿಸಿದರು. ಈ ಕಾಯ್ದೆಯಡಿಯಲ್ಲಿ ಯಾವುದೇ ವ್ಯಕ್ತಿಯನ್ನು ವಿಚಾರಣೆ ಇಲ್ಲದೆ ಬಂಧಿಸಿ, ಕೋರ್ಟ್‌ನ ಮೂಲಕ ಅಪರಾಧಿ ಎಂದು ನಿರ್ಣಯಿಸಿ ಶಿಕ್ಷೆ ವಿಧಿಸಬಹುದಿತ್ತು. ಇದು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಸಭೆ ಸೇರುವುದನ್ನು, ಸಂಘಟನೆ ಮಾಡುವುದನ್ನು ಮತ್ತು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನೂ ಕಿತ್ತುಕೊಂಡಿತ್ತು. ಗಾಂಧಿ ಇದನ್ನು ಪ್ರತಿಭಟಿಸುವ ಸಲುವಾಗಿ, 'ಸತ್ಯಾಗ್ರಹ ಸಭಾ' ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ಹೋರಾಟವನ್ನು ಆರಂಭಿಸಿದರು. ಬೃಹತ್ ಸಭೆ, ಮೆರವಣಿಗೆ, ಬಹಿಷ್ಕಾರ ಮುಂತಾದ ವೈವಿಧ್ಯಮಯ ರಾಜಕೀಯ ಕಾರ್ಯವಿಧಾನಗಳನ್ನು ಇದರ ಮೂಲಕ ಕೈಗೊಳ್ಳಲಾಯಿತು. ಜಲಿಯನ್‌ವಾಲಾಭಾಗ್ ಹತ್ಯಾಕಾಂಡ ಬ್ರಿಟಿಷ್ ಸರ್ಕಾರವು ರೌಲೆತ್ ಕಾಯ್ದೆಯ ಅನುಷ್ಠಾನದ ವಿರುದ್ಧದ ಪ್ರತಿಭಟನೆಗಳನ್ನು ದಮನಿಸಲು ನಿರ್ಧರಿಸಿತ್ತು. ಗಾಂಧಿ 1919 ಏಪ್ರಿಲ್ 6ರಂದು ಒಂದು ಬೃಹತ್ ಹರತಾಳಕ್ಕೆ ಕರೆ ನೀಡಿದರು. ಪಂಜಾಬಿನಲ್ಲಿ ಡಾ. ಫಕುರುದ್ಧೀನ್, ಡಾ. ಸತ್ಯಪಾಲ ಮುಂತಾದವರನ್ನು ಬಂಧಿಸಲಾಯಿತು. ಇದನ್ನು ವಿರೋಧಿಸಲು 1919 ಏಪ್ರಿಲ್ 13ರಂದು ಪಂಜಾಬ್‌ನ ಅಮೃತ್‌ಸರದ ಜಲಿಯನ್ ವಾಲಾ ಬಾಗ್‌ನಲ್ಲಿ ಜನರು ಬೈಸಾಕೀ ಹಬ್ಬದಂದು ಪ್ರತಿಭಟನಾ ಸಭೆ ಸೇರಿದರು. ಅಮೃತಸರದ ಸೈನ್ಯಾಧಿಕಾರಿ ಜನರಲ್ ಡಯರ್ ಅಲ್ಲಿ ನೆರೆದ ಜನರ ಮೇಲೆ ಹತ್ತು ನಿಮಿಷಗಳ ಅವ್ಯಾಹತ ಗುಂಡಿನ ದಾಳಿ ನಡೆಸಿದ ಕಾರಣ ಸುಮಾರು 380 ಜನರು ಸತ್ತು ಸಾವಿರಾರು ಜನರು ಗಾಯಗೊಂಡರು. ಈ ಘಟನೆಯು ಗಾಂಧೀಜಿಯನ್ನು ಸೇರಿದಂತೆ ಅನೇಕ ಭಾರತೀಯರನ್ನು ಶೋಕತಪ್ತರನ್ನಾಗಿಸಿತು. ಈ ಘಟನೆಯ ನಂತರ ಪಂಜಾಬ್‌ನಲ್ಲಿ ಸೈನಿಕ ಆಡಳಿತ ಜಾರಿಗೊಳಿಸಲಾಯಿತು. ಈ ಹತ್ಯಾಕಾಂಡವನ್ನು ವಿರೋಧಿಸಿ ರವೀಂದ್ರನಾಥ ಠಾಗೋರ್ ತಮ್ಮ 'ನೈಟ್‌ಹುಡ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ವಾಪಾಸ್ ಮಾಡಿದರು. ಗಾಂಧಿ, ಅಸಹಕಾರ ಚಳವಳಿಯನ್ನು ಆರಂಭಿಸಲು ಈ ಪ್ರಕರಣವೂ ಕಾರಣವಾಯಿತು. ಮುಗ್ಧ ಭಾರತೀಯ ಹೋರಾಟಗಾರರನ್ನು ಹತ್ಯೆಗೈದ ಜನರಲ್ ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್‌ಸಿಂಗ್‌ನು ಹತ್ಯೆ ಮಾಡಿದನು.

ಸವಿನಯ ಕಾನೂನುಭಂಗ ಚಳವಳಿ: 1930 ಫೆಬ್ರವರಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸಬರ್‌ಮತಿಯಲ್ಲಿ ಸಭೆ ಸೇರಿ ಕಾನೂನುಭಂಗ ಚಳವಳಿಯನ್ನು ಹಮ್ಮಿಕೊಳ್ಳಲು ನಿರ್ಣಯಿಸಿತು. ಗಾಂಧಿ ಮಾರ್ಚ್ 2, 1930 ರಂದು ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸ್‌ರಾಯ್‌ಗೆ ಬರೆದರು. ಒಂದು ವೇಳೆ ಸರ್ಕಾರ ಇದಕ್ಕೆ ತಪ್ಪಿದ್ದಲ್ಲಿ, ತೆರಿಗೆ ನಿರಾಕರಣೆಯ ಜತೆ ನಾಗರಿಕ ಕಾನೂನುಭಂಗ ಚಳವಳಿಯನ್ನು ಆರಂಭಿಸುವುದಾಗಿ ಗಾಂಧಿ ಘೋಷಿಸಿದರು. ವೈಸ್‌ರಾಯ್ ಈ ಪತ್ರದ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ 1930 ಮಾರ್ಚ್ 12ರಂದು ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲತೀರ ದಂಡಿಯವರೆಗೆ ಸುಮಾರು 375 ಕಿ.ಮೀ. ಉಪ್ಪಿನ ಸತ್ಯಾಗ್ರಹ ದೂರವನ್ನು ಕ್ರಮಿಸಿದರು. ಏಪ್ರಿಲ್ 6ರಂದು ಗಾಂಧಿ ದಂಡಿಯನ್ನು ತಲುಪಿ ಬ್ರಿಟಿಷರು ಹೇರಿದ ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು. ಕಾನೂನುಭಂಗ ಚಳವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರೂ, ವಲ್ಲಭಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು. ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

ಕಾ. ಬಿ.ಆರ್. ಅಂಬೇಡ್ಕರ್: ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದ್ದಿದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರಿಚೀಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.

## FIRST BATCH GRADE X TOPPERS : ACADEMIC YEAR 2021-22


AKSHATHA RAO M. J
96 %


HARSHITHA V J
91 %


AKSHATHA M
85%


AISHWARYA C
81%


SPOORTHI U
81%


S. THANMAY
79 %


RUCHITHA PRIYA
78 %


SHIVA SHANAR
78%


SINCHANA M
78%


MADHU ACCHUTH
76%

## STUDENT COUNCIL MEMBERS : ACADEMIC YEAR 2022-23






MAHADEV PRASAD. H N
Head Boy


DHANUSHREE. M
Head Girl


YASHWANTH. M
Sports Minister


MANASWINI K BHAT
Asst. Sports Minister


KEERTANA V PRASAD
Treasurer


VIRUPAKSHA
Secretary


MOULYA
Blue House Captain


SINCHANA
Blue House Vice Captain



DHANYA
Green House Captain


MOHITH
Green House Vice Captain


ARPITHA
Red House Captain



ROHAN
Red House Vice Captain


PRAGNA
Yellow House Captain


KISHOR
Yellow House Vice Captain



MAHESH KUMAR H. P
Coordinator

## DRAWING COMPETITION WINNERS



NAMRATHA - I A | SHANVI - I B | ANUSHREE - II A | CHANDAN - II B | INCHARA - II C | MANAVI - III A | NAMITH - IV B

## SPEECH COMPETITION WINNERS



PRANATHI - V B | MADHAVA - I C | PRATHIKSHA - II B | MOHITH - III C | ABHINANDAN M - IV D | SANVI - V D | PREETHAM - VI B


## QUIZ COMPETITION WINNERS



VISHRUTH V - VI B | DIGANTH - IV B | BANDAVI T.S - V D | SHANKAR DEKSHITH VIII B | ROHITH. P - IX | KEERTHANA - X | DHAVAN - I A

## POSTER MAKING COMPETITION WINNERS

## ESSAY WRITING WINNERS



LAKSHYA - I B | SRUJAN - II A | POORVI A M - II B | MOKSHITH ARYA - II C | BHOOMIKA - III C | PRUTHVIRAJ M R - VI B | SOGRA AIMAN - VII C


## ESSAY WRITING WINNERS



DHEERAJ PATEL S VIII B | NAGABASAVANNA VII B | DHANUSHREE M VIII - B | NITHIN Y U - IX | PRAGATHI M R - IX | JNANESHWARI - IX | MOHAMMED MUEEZ - X

## DANCING COMPETITION WINNERS

## ESSAY WRITING WINNERS



LIKHITHA PATEL - IX | MANASWINI K BHAT - VIII B | DHANUSHREE M VIII - B | AMULYA U . R - VII A | VISHRUTH V - VI B | YUKTA RAVISHANKAR - VII C | RISHA R P - VI B

## INDIA BOOK OF RECORDS WINNERS



AARUSH NAGARAJ - L K G B | AYUSH S GANJAM - VI A

## SINGING COMPETITION WINNERS



PALLAVI - VI B | RAJATHASHREE - VII C

## MENTAL APTITUDE OLYMPIAD WINNERS



THANVI, VEDIKA, CHIRAG, LIKHITH & MALLIK KANTHARAJU

## ಹಿಂಸೆಯ ಪರಿಣಾಮ – ಕೀರ್ತನಾ. ಪಿ. ೧೦ನೇ ತರಗತಿ

ಒಂದು ಊರಿನಲ್ಲಿ ಒಬ್ಬ ಬಾಲಕನಿದ್ದನು. ಅವನ ಹೆಸರು ಮಾಂಡವ್ಯ. ಅವನು ತುಂಬಾ ಸಂಸ್ಕಾರವಂತನಾಗಿದ್ದರೂ ಸಹ ಅವನಿಗೊಂದು ದುರಭ್ಯಾಸವಿತ್ತು. ಅದೆಂದರೆ ಚಿಟ್ಟೆಗಳನ್ನು ಹಿಡಿದು ಹಿಂಸಿಸುವುದು. ಹೀಗೆ ಮಾಡುವುದೆಂದರೆ ಅವನಿಗೆ ಎಲ್ಲಿಲ್ಲದ ಖುಷಿ. ಈ ರೀತಿಯ ವಿಕೃತ ಭಾವದ ಮನಸ್ಥಿತಿ ಆ ಬಾಲಕನಲ್ಲಿತ್ತು. ಉಧ್ಯಾನವನಕ್ಕೆ ಹೋಗುವುದು, ಅಲ್ಲಿ ಹೂಗಳ ಮೇಲೆ ಕುಳಿತುಕೊಳ್ಳುವ ಬಣ್ಣ ಬಣ್ಣದ ಚಿಟ್ಟೆಗಳನ್ನು ಸದ್ದಿಲ್ಲದೇ ಹಿಡಿಯುವುದು, ಅವುಗಳ ಬಾಲಕ್ಕೆ, ದೇಹಕ್ಕೆ, ತಲೆಗೆ ಎಲ್ಲಂದರಲ್ಲಿ ಕಡ್ಡಿಯಿಂದ ಚುಚ್ಚಿ ಚುಚ್ಚಿ ಹಿಂಸೆ ಕೊಡುವುದು, ಆ ಚಿಟ್ಟೆಗಳು ನೋವಿನಿಂದ ಒದ್ದಾಡುವುದನ್ನು ನೋಡಿ ಆನಂದ ಪಡುವುದು ಇವನ ನಿತ್ಯದ ಕೆಲಸಗಳಲ್ಲಿ ಒಂದಾಗಿತ್ತು. ದಿನದಲ್ಲಿ ಒಮ್ಮೆಯಾದರೂ ಚಿಟ್ಟೆಗಳಿಗೆ ಹಿಂಸಿಸದಿದ್ದರೆ ಆ ಬಾಲಕನಿಗೆ ಸಮಾಧಾನವೇ ಇರುತ್ತಿರಲಿಲ್ಲ. ಇವನು ನೀಡುತ್ತಿದ್ದ ಹಿಂಸೆಯ ತೀವ್ರತೆ ಎಷ್ಟಿತ್ತೆಂದರೆ, ಆ ಚಿಟ್ಟೆಗಳು ವಿಲವಿಲ ಒದ್ದಾಡಿ ಒದ್ದಾಡಿ ನರಕಯಾತನೆ ಅನುಭವಿಸಿ ಆದಷ್ಟು ಬೇಗ ಸತ್ತರೆ ಸಾಕು ಎಂದು ದೇವರನ್ನು ಬೇಡಿಕೊಳ್ಳುವಂತೆ ಇರುತ್ತಿತ್ತು ಅವುಗಳ ಸ್ಥಿತಿ. ಒಟ್ಟಾರೆಯಾಗಿ ಈ ಬಾಲಕನಿಗೆ ಈ ಬಗೆಯ ವಿಚಿತ್ರವಾದ, ವಿಲಕ್ಷಣವಾದ, ವಿಕಾರವಾದ, ಅಸ್ವಾಭಾವಿಕ ಮನಸ್ಸು ಹೇಗೆ ಬಂತು ಎಂಬುದೇ ತರ್ಕಕ್ಕೆ ನಿಲುಕದ ಅಂಶವಾಗಿತ್ತು. ಇದೊಂದು ದುರ್ಗುಣವನ್ನು ಬಿಟ್ಟರೆ ಇನ್ನುಳಿದ ಎಲ್ಲಾ ವಿಷಯಗಳಲ್ಲೂ ಉತ್ತಮ ಗುಣವುಳ್ಳವನಾಗಿದ್ದನು ಈ ಮಾಂಡವ್ಯ.

ದಿನಗಳು ಹೀಗೆಯೇ ಕಳೆಯುತ್ತಿರಲು ಮಾಂಡವ್ಯನ ವಿದ್ಯಾಭ್ಯಾಸ ಮುಂದುವರೆದು ಅವನು ಅತ್ಯಂತ ಉತ್ತಮ ರೀತಿಯಲ್ಲಿ ಕಲಿಯತೊಡಗಿದನು ಇದರ ಜೊತೆಗೆ ಉತ್ತಮೋತ್ತಮ ಸಂಸ್ಕಾರಗಳನ್ನೂ ಬೆಳೆಸಿಕೊಂಡನು. ವಿದ್ಯಾಭ್ಯಾಸ ಮುಗಿಯುತ್ತಿದ್ದಂತೆ ಕಠಿಣ ತಪಸ್ಸನ್ನು ಆಚರಿಸಲು ಪ್ರಾರಂಭಿಸಿದನು. ಧೀರ್ಘಕಾಲದವರೆವಿಗೆ ತಪಸ್ಸನ್ನು ಆಚರಿಸಿ ಜ್ಞಾನ ಪಡೆದು ದೊಡ್ಡ ಋಷಿಯಾದನು. ಹಾಗೆಯೇ ಕಾಡಿನಲ್ಲಿ ತನ್ನದೇ ಆದ ಆಶ್ರಮವನ್ನು ಸ್ಥಾಪಿಸಿಕೊಂಡು ಅಲ್ಲಿಯೇ ಪೂಜೆ–ಪುನಸ್ಕಾರ ಮಾಡಿಕೊಂಡು ವಾಸಮಾಡತೊಡಗಿದನು.

ಅದೊಂದು ದಿನ ಮಾಂಡವ್ಯನು ತಪಸ್ಸಿನಲ್ಲಿ ನಿರತನಾಗಿದ್ದನು. ಅವನು ಏಕಾಗ್ರತೆಯಿಂದ ದೇವರ ಧ್ಯಾನದಲ್ಲಿದ್ದಾಗ ಕಳ್ಳರು ಓಡುತ್ತಾ ಮಾಂಡವ್ಯನ ಆಶ್ರಮಹ ಬಂದರು. ಅವರ ಹಿಂದೆಯೇ ಕೆಲವು ರಾಜಭಟರೂ ಕಳ್ಳರನ್ನು ಬೆನ್ನುಹತ್ತಿ ಬರುತ್ತಿದ್ದರು. ರಾಜಭಟರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕಳ್ಳರು ಆಶ್ರಮವನ್ನು ಪ್ರವೇಶಿಸಿ ತಾವು ಕದ್ದಿದ್ದ ನಗ–ನಾಣ್ಯಾದಿಗಳನ್ನು ಅಲ್ಲಿಯೇ ಅಡಗಿಸಿಟ್ಟರು ಹಾಗೂ ತಾವೂ ಸಹ ಅಲ್ಲಿತೇ ಅಡಗಿಕೊಂಡರು. ಇಷ್ಟೆಲ್ಲಾ ನಡೆದರೂ ಮಾಂಡವ್ಯನಿಗೆ ಮಾತ್ರ ಯಾವುದರ ಅರಿಯೂ ಇರಲಿಲ್ಲ. ಅವನು ತನ್ನ ಪಾಡಿಗೆ ಧ್ಯಾನಾಸಕ್ತನಾಗಿ ಕುಳಿತಿದ್ದನು. ರಾಜಭಟರು ಆಶ್ರಮವನ್ನು ಪ್ರವೇಶಿಸಿದೊಡನೆಯೇ ಋಷಿಯನ್ನು ಕಂಡು ನಮಸ್ಕರಿಸಿ, "ಮುನಿಗಳೇ, ಕಳ್ಳರು ಯಾವ ಕಢೆ ಹೋದರೆಂಬುದನ್ನು ಹೇಳಬಲ್ಲಿರಾ?" ಎಂದು ಬಗೆ ಬಗೆಯ ರೀತಿಯಲ್ಲಿ ಕೇಳಿದರು. ಆದರೆ ಮಾಂಡವ್ಯ ಧ್ಯಾನದಲ್ಲಿ ಕುಳಿತಿದ್ದರಿಂದ ರಾಜಭಟರ ಯಾವುದೇ ಪ್ರಶ್ನೆಗಳಿಗೆ ಉತ್ತರ ನೀಡಲಿಲ್ಲ. ಇದರಿಂದ ಅನುಮಾನಗೊಂಡ ರಾಜಭಟರು ಬಹುಶಃ ಇವನು ಋಷಿಯ ವೇಶದಲ್ಲಿರುವ ಕಳ್ಳರ ನಾಯಕನಿರಬೇಕು ಎಂದು ಭಾವಿಸಿ, ಶಂಕೆಯಿಂದಲೇ ಆಶ್ರಮದ ಒಳಹೋದರು. ಒಳಹೋದೊಡನೆ ಅಲ್ಲಿ ಕಳ್ಳರು ತಾವು ಕದ್ದಿದ್ದ ವಸ್ತುಗಳ ಸಮೇತ ಸಿಕ್ಕಿಬಿದ್ದರು. ಇದು ರಾಜಭಟರ ಅನುಮಾನಕ್ಕೆ ಬಲವಾದ ಸಾಕ್ಷಿಯಾಯಿತು. ರಾಜಭಟರು ಸಿಟ್ಟಿನಿಂದ ಕಳ್ಳರ ಜೊತೆಗೆ ಋಷಿಯನ್ನೂ ಕೈಕಾಲು ಕಟ್ಟಿ ಎಳೆದುಕೊಂಡು ಹೋಗಿ ರಾಜನ ಎದುರು ನಿಲ್ಲಿಸಿ ನಡೆದದನ್ನೆಲ್ಲಾ ಹೇಳಿದರು. ರಾಜನೂ ಕೂಡ ವಿಧ ವಿಧ ರೀತಿಯಲ್ಲಿ ವಿಚಾರಿಸದನು. ಆದರೂ ಮಾಂಡವ್ಯ ನಿರುತ್ತರನಾಗಿ ನಿಂತನು. ಇದರಿಂದ ರಾಜನು ಅತೀವವಾಗಿ ಕೋಪಗೊಂಡನು. ಉಳಿದ ಕಳ್ಳರೊಂದಿಗೆ ಮಾಂಡವ್ಯನನ್ನೂ ಶೂಲಕ್ಕೆ ಏರಿಸುವಂತೆ ಆಜ್ಞೆಯನ್ನಿತ್ತನು.

ರಾಜನ ಆಜ್ಞೆಯಂತೆ ಸೇವಕರು ಕಳ್ಳರೊಂದಿಗೆ ಮಾಂಡವ್ಯನನ್ನೂ ಶೂಲಕ್ಕೆ ಏರಿಸಿದರು. ಕೆಲವು ನಿಮಿಷಗಳಲ್ಲೇ ಕಳ್ಳರೆಲ್ಲರೂ ಸತ್ತುಹೋದರು. ಆದರೆ ಮಾಂಡವ್ಯ ಮಾತ್ರ ಸಾಯಲಿಲ್ಲ. ಕೆಲವು ಗಂಟೆಗಳನ್ನು ಬಿಟ್ಟು ನೋಡಿದರು. ಆಗಲೂ ಋಷಿ ಸತ್ತಿರಲಿಲ್ಲ. ಒಂದೆರಡು ದಿನಗಳನ್ನು ಬಿಟ್ಟು ನೋಡಿದರು, ಆಗಲೂ ಮುನಿ ಸತ್ತಿರಲಿಲ್ಲ. ಎಲ್ಲರೂ ಇದನ್ನು ಗಂಭೀರವಾಗಿ ಪರಿಗಣಿಸಿ ಚರ್ಚಿಸಿದರು. ಬಲ್ಲವರನ್ನು ವಿಚಾರಿಸಿದರು. ಅವರಲ್ಲೊಬ್ಬ ಇವರು ದೈವ ಪುರುಷನೇ ಇರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದನು. ಎಲ್ಲರೂ ಅವನಿಗೆ ಸಮ್ಮತಿಸಿದರು. ಕೂಡಲೇ ರಾಜನು ಆ ಮುನಿಯನ್ನು ಬಂಧಮುಕ್ತ ಮಾಡಿ ಗೌರವವಾಗಿ ಕರೆತರುವಂತೆ ಆದೇಶಿಸಿದನು. ಸೈನಿಕರು ಬಂದು ಶೂಲವನ್ನು ತೆಗೆದು ಹಾಕಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಕೊನೆಗೆ ಅದನ್ನು ಕತ್ತರಿಸಿ ತೆಗೆಯಬೇಕಾಯಿತು. ಮೂಳೆಯಂತಹ ಚೂಪಾದ ಶೂಲದ ಮೊನೆ ಮಾಂಡವ್ಯನ ದೇಹದಲ್ಲೇ ಉಳಿದುಬಿಟ್ಟಿತು. ಇದು ಮಾಂಡವ್ಯ ಸಾಯುವವರೆವಿಗೂ ನೋವು ನೀಡುತ್ತಿತ್ತು.

ಕೊನೆಗೆ ಒಂದು ದಿನ ಮಾಂಡವ್ಯನು ದೇಹ ತ್ಯಾಗ ಮಾಡಿ ಯಮನ ಬಳಿ ಹೋದನು. ಯಮನನ್ನು ಕಂಡು "ಯಮನೇ, ತಪಸ್ವಿಯಾದ ನಾನು ಏಕೆ ಶೂಲವೇರುವಂತಾಯಿತು" ಎಂದು ಕೇಳಿದನು. ಆಗ ಯಮನು "ನೀನು ಚಿಕ್ಕವನಾಗಿದ್ದಾಗ ಚಿಟ್ಟೆಗಳ ಬಾಲ ಹಾಗೂ ದೇಹಕ್ಕೆ ಕಡ್ಡಿಗಳಿಂದ ಚುಚ್ಚಿ ಚುಚ್ಚಿ ಹಿಂಸೆ ಕೊಡುತ್ತಿದ್ದೆ. ಆ ಕಾರಣದಿಂದ ನೀನೂ ಅದೇ ತರಹದ ಹಿಂಸೆ ಅನುಭವಿಸುವಂತಾಯಿತು"

## ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು– ಸೌಜನ್ಯ ೧೦ನೇ ತರಗತಿ

ಬ್ರಿಟೀಷರ ಕಪಿಮುಷ್ಟಿಯಿಂದ ಭಾರತವನ್ನು ರಕ್ಷಣೆ ಮಾಡಲು ಕೋಟ್ಯಂತರ ಸ್ವಾತಂತ್ರ್ಯ ಸೇನಾನಿಗಳು ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಅವರೆಲ್ಲರ ತ್ಯಾಗ, ಬಲಿದಾನದ ನೆರಳಿನಲ್ಲಿ ನಾವು ಸ್ವತಂತ್ರವಾಗಿ ಬಾಳ್ವೆ ನಡೆಸುತ್ತಿದ್ದೇವೆ. ಈ ವರ್ಷ ಸ್ವತಂತ್ರ ಭಾರತದ ಪಾಲಿಗೆ ಅತೀ ಮಹತ್ವದ ವರ್ಷ. ಏಕೆಂದರೆ ನಮ್ಮ ದೇಶ ಸ್ವಾತಂತ್ರ್ಯ ಗಳಿಸಿ ೭೫ ವರ್ಷಗಳು ಕಳೆದಿವೆ. ಈ ಸಂದರ್ಭದಲ್ಲಿ ನಾವು ಪ್ರಸ್ತುತ ವರ್ಷವನ್ನು 'ಆಜಾದೀ ಕಾ ಅಮೃತ ಮಹೋತ್ಸವ' ಎಂಬ ಹೆಸರಿನಲ್ಲಿ ಆದರಿಸುತ್ತಿದ್ದೇವೆ. ಈ ವಿಶೇಷ ಆಚರಣೆಯು ದೇಶಾದ್ಯಂತ ವಿಜೃಂಭಣೆಯಿಂದಲೂ, ವೈಭವದಿಂದಲೂ ಆಚರಣೆಯಾಗಬೇಕು ಎಂದು ಕೇಂದ್ರ ಸರ್ಕಾರ ಈಗಾಗಲೇ ಸೂಚಿಸಿದೆ. ಈ ವಿಶೇಷ ಸಂದರ್ಭದಲ್ಲಿ ಕರ್ನಾಟಕದ ಕೆಲವು ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಲು ಬಯಸುತ್ತೇನೆ.

### ಕಿತ್ತೂರು ರಾಣಿ ಚೆನ್ನಮ್ಮ

ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟೀಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ಕರ್ನಾಟಕದ ಕೆಚ್ಚೆದೆಯ ಮಹಿಳೆ. ಅವರು ಕಿತ್ತೂರಿನ ರಾಜವಂಶದ ರಾಣಿಯಾಗಿದ್ದಳು. ಇವರು ೨೩ ಅಕ್ಟೋಬರ್ ೧೭೭೮ ರಲ್ಲಿ ಬೆಳಗಾವಿಯಲ್ಲಿ ಜನಿಸಿದಳು. ಇವರ ಪತಿಯ ಹೆಸರು ರಾಜಾ ಮಲ್ಲಸರ್ಜ. ಇವರು ೨ ಫೆಬ್ರವರಿ ೧೮೨೯ ರಂದು ಮರಣ ಹೊಂದಿದಳು.

### ಸಂಗೊಳ್ಳಿ ರಾಯಣ್ಣ

ಕಿತ್ತೂರು ರಾಣಿ ಚೆನ್ನಮ್ಮಳ ಆಳ್ವಿಕೆಯಲ್ಲಿ ಸೈನ್ಯವನ್ನು ಮುನ್ನಡೆಸುತ್ತಿದ್ದವನು ಸಂಗೊಳ್ಳಿ ರಾಯಣ್ಣ. ರಾಣಿ ಚೆನ್ನಮ್ಮಳಂತೆಯೇ ಬ್ರಿಟೀಷರ ವಿರುದ್ಧ ಹೋರಾಡಿದ ಕನ್ನಡಿಗ. ರಾಣಿ ಚೆನ್ನಮ್ಮಳನ್ನು ಬ್ರಿಟೀಷರು ಬಂಧಿಸಿದ ನಂತರವೂ ರಾಯಣ್ಣ ತನ್ನ ನಾಡಿನ ಉಳಿವಿಗಾಗಿ ವೀರಾವೇಶದಿಂದ ಹೋರಾಟ ನಡೆಸಿದನು.

### ಉಮಾಬಾಯಿ ಕುಂದಾಪುರ

ಇವರು ಕುಂದಾಪುರದವರು. ತಂದೆ– ಗೋಲಿಕೇರಿ ಕೃಷ್ಣರಾವ್, ತಾಯಿ– ಜುಂಗಾಬಾಯಿ. ಇವರು ಮಹಿಳೆಯರನ್ನೆಲ್ಲಾ ಸಂಘಟಿಸಿ ಒಂದು ದೊಡ್ಡ ಮಹಿಳಾ ಸ್ವಯಂಸೇವಕರ ಸಂಘವನ್ನು ಸ್ಥಾಪಿಸಿದರು ಇದರ ಮೂಲಕ ಬ್ರಿಟೀಷರ ವಿರುದ್ಧ ಹೋರಾಡಿದಳು.

### ಕಾರ್ನಾಡ್ ಸದಾಶಿವ ರಾವ್

ಇವರು ಮಂಗಳೂರಿನ ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ ಬ್ರಿಟೀಷರ ವಿರುದ್ಧ ಹೋರಾಡಿದ ಒಬ್ಬ ವೀರ ಕನ್ನಡಿಗ. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದೂ ಅಲ್ಲದೇ ಅನೇಕ ಸಾಮಾಜಿಕ ಉಪಯುಕ್ತ ಸೇವೆಗಳನ್ನೂ ಮಾಡಿದರು.

### ಟಿಪ್ಪು ಸುಲ್ತಾನ್

ಮೈಸೂರು ಹುಲಿ ಎಂದೇ ಕರೆಯಲ್ಪಡುವ ಟಿಪ್ಪು ಸುಲ್ತಾನ್ ಮೈಸೂರು ಸಾಮ್ರಾಜ್ಯವನ್ನು ೧೭೮೨ ರಿಂದ ೧೭೯೯ ರವರೆವಿಗೆ ಆಳ್ವಿಕೆ ನಡೆಸಿದನು. ಟಿಪ್ಪು ತನ್ನ ಆಳ್ವಿಕೆಯ ಕಾಲದಲ್ಲಿ ಹಲವು ಬಾರಿ ಬ್ರಿಟೀಷರೊಂದಿಗೆ ಹೋರಾಟ ನಡೆಸಿದನು. ಅಷ್ಟೇ ಅಲ್ಲದೇ ಬ್ರಿಟೀಷರನ್ನು ಭಾರತದಿಂದಲೇ ಓಡಿಸಲು ಅನೇಕ ಪ್ರಯತ್ನಗಳನ್ನು ಮಾಡಿದ್ದನು.

### ಯಶೋಧರ ದಾಸಪ್ಪ

ಯಶೋಧರ ದಾಸಪ್ಪ ಒಬ್ಬ ಗಾಂಧೀವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರ. ಇವರು ರಾಷ್ಟ್ರೀಯ ಕಾಂಗ್ರೆಸ್ ಆಫ್ ಇಂಡಿಯಾದ ಜೊತೆ ರಾಜಕೀಯವಾಗಿ ಹೊಂದಿಕೊಂಡಿದ್ದರು. ಇವರು ನಿಜಲಿಂಗಪ್ಪ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು.

ನನಗೆ ದೊರೆತ ಮಾಹಿತಿಯ ಅನುಸಾರ ಕೆಲವು ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರ ಕಿರು ಪರಿಚಯ ಮಾಡಿಕೊಟ್ಟಿರುವೆ. ಬಗೆಯುತ್ತಾ ಹೋದರೆ ಆಳ ಹೆಚ್ಚು ಎಂಬಂತೆ ಇನ್ನೂ ಲಕ್ಷಾಂತರ ಹೋರಾಟಗಾರರ ಹೆಸರು ಈ ಮಣ್ಣಿನ ಕಣ ಕಣದಲ್ಲಿ ಬೆರೆತು ಹೋಗಿವೆ.

## ಕೋರಿಕೆ – ಲೋಕೇಶ್ .ಡಿ



ಭಾರತೀಯನ ಹೃದಯ ಪೀಠವನು
ಅಲಂಕರಿಸಿಹ ಓ ಭಾರತ ಮಾತೆ।
ಭಾರತೀಯನ ಅಣು ಕಣಗಳಲ್ಲೂ
ಕಲೆತು ಹೋಗಿರುವೆ ನೀ ಜನ್ಮದಾತೆ॥

ಅನೇಕತೆಯಲ್ಲೂ ಏಕತೆಯ ಮಂತ್ರ
ಅನುರಣಿಸುತಿದೆ ಪ್ರತಿಯೊಬ್ಬರಲೂ।
ವಿವಿಧ ಧರ್ಮಗಳ ಆಶ್ರಯ ತಾಣ
ವೈವಿಧ್ಯಮಯ ಸಂಸ್ಕೃತಿ ಎಲ್ಲೆಲ್ಲೂ॥

ಗಗನಚುಂಬಿ ಪರ್ವತಗಳು
ಪಾತಾಳದ ಆಳಕಿಳಿವ ಕಡಲು।
ಹಚ್ಚ ಹಸಿರ ಸೃಷ್ಟಿಸಿದ ಹರಿದ್ವರ್ಣ ಕಾಡುಗಳು
ಸಂಮೃದ್ಧ ಮಳೆ ತರುವ ಕಪ್ಪು–ಬಿಳಿ
ಮುಗಿಲು॥

ದೇಶ ಸೇವೆಯ ವಿಷಯ ಬಂದರೆ
ತನು ಮನಗಳ ತುಂಬೆಲ್ಲಾ ದೇಶಭಕ್ತಿ।
ಪ್ರಾಣದ ಹಂಗನು ತೊರೆದು ನಿಲ್ಲುವೆವು
ತೋರಿಸಿ ಒಗ್ಗಟ್ಟಿನ ಶಕ್ತಿ॥

ಬಿಸಿನೆತ್ತರಿನ ಭರತ ಕಂದನಲೂ
ಸೌಹಾರ್ಧತೆಯ ಪ್ರೀತಿ ಸಾಗರ।
ಇತರರನೂ ತನ್ನಂತೆ ಬಗೆಯುವ
ಹೃದಯ ವೈಶಾಲ್ಯತೆಯ ಆಗರ॥

ಭಾರತವೆಂಬ ಹೆಸರಿನಲ್ಲಿಯೇ
ಸಹಸ್ರ ಸಹಸ್ರ ಆನೆ ಬಲ।
ತಾಯ ಮಡಿಲಲಿ ಆಡಿ ಬೆಳೆದವಗೆ
ಆಕೆಯ ಕೀರುತಿ ಬೆಳಗುವ ಛಲ॥

ಹಿಂದಡಿಯನು ಇಡೆವು ನಾವು
ಸಿದ್ಧ ವಿಶ್ವಸ್ಪರ್ಧೆಗೆ।
ಕರುಣೆ ತೋರಿ ಹರಸು ಮಾತೆ
ನಿಗ್ರ್ಯ ಸತ್ಯ ಗೆಲುವಿಗೆ॥
ಭಾರತದ ಧ್ವಜ ಹಿಡಿದು
ಮುನ್ನುಗ್ಗುವ ಹುರುಪಿನಲಿ।
ಉತ್ಸಾಹವ ಉತ್ತೇಜಿಸು
ಉತ್ಕೃಷ್ಟ ಮಟ್ಟದಲಿ॥

ದೇಶಪ್ರೇಮಿ ಕೇಳುತಿಹೆನು
ಕರುಣಿಸೊಂದು ಕೋರಿಕೆಯನು।
ಪ್ರತಿಜನ್ಮವೂ ನಿನ್ನುದರದಿ
ಜನಿಸುವಂತ ವರವನು॥

**Chief Editor**
Fr. Rajesh O. Praem

**Editorial Team**
Mr. Lokesh
Ms. Neethu
Mahadev Prasad H N
Dhanushree M

**Design Editor**
Mr. Manjunath Prakash